ಎನ್. ವಸಂತಾ, ಬೆಂಗಳೂರು
*ಕಿವಿಯಿದ್ದೂ ಕೇಳಿಸದಿರುವುದು ಯಾವಾಗ ಅಣ್ಣಯ್ಯಾ?*




ಒಳ್ಳೇ ಸೀನ್ಸ್ ನೋಡ್ತಿರುವಾಗ ಅಮ್ಮ 'ಪುಟ್ಟಿ, ಬೇಗೋಡ್ಹೋಗಿ ಮೆಣ್ಸಿನ್ಕಾಯಿ ತಂದ್ಕೊಡೆ' ಅಂದಾಗ.

ರಾಮಕೃಷ್ಣಾರೆಡ್ಡಿ, ಯಲಹಂಕ
*ಅಮರ್, ಅಕ್ಬರ್, ಆಂಥೋಣಿ ನೀರಿನಲ್ಲಿ ಮುಳುಗಿದರೆ ಯಾವ ದೇವರು ಅವರನ್ನು ಕಾಪಾಡುತ್ತಾರೆ?*
ಕೃಷ್ಣನೇ. ಇಡೀ ದೇವತೆಗಳ ಇತಿಹಾಸದಲ್ಲಿ ವಾಟರ್ ಸ್ಪೋರ್ಟ್ಸ್(ಜಲಕ್ರೀಡೆ), ವೇಯ್ಟ್ ಲಿಫ್ಟಿಂಗ್‌ನಲ್ಲಿ ಚಾಂಪಿಯನ್ ಕೃಷ್ಣ ಒಬ್ಬನೇ.

ಆರ್. ಮಧುಸೂದನ್, ಹಾಸನ
*ಜಗಳವನ್ನೇ ಆಡದೆ ಸಂಸಾರ ನಡೆಸಿದ 100 ದಂಪತಿಗಳನ್ನು ಸನ್ಮಾನಿಸಬೇಕೆಂದಿದ್ದೇನೆ. ಮೊದಲ ಹೆಸರು ನಿಮ್ಮನ್ನು ಬರೆದುಕೊಳ್ಳಲೆ?*
ಖಂಡಿತ ಬರೆದುಕೊಳ್ಳಿ; ಅಂದಹಾಗೇ... ನೀವೂ ಅನರ್ಹರಿಗೆ ಮಾತ್ರವೇ ಪ್ರಶಸ್ತಿ ಕೊಡುತ್ತಿರುವುದು ತಾನೆ?

ದೇವೇಂದ್ರ, ಕಡೂರು
*ಪ್ರಾಣಿ, ಪಕ್ಷಿಗಳು ವ್ಯಾಯಾಮ, ಪ್ರಾಣಾಯಾಮ ಮಾಡುತ್ತವಾ ರಾಮ್?*




ವಾಯುವಿಹಾರಕ್ಕೆ ಕೊರತೆಯಿಲ್ಲದ, ಹೆಂಡ, ಬೋಂಡ ಇಲ್ಲದ ಜೀವನಕ್ಕೆ ಅವೆಲ್ಲ ಅಗತ್ಯವಿಲ್ಲ.

ಎಂ.ಎನ್. ಸೋಮಶೇಖರ್, ಮೈಸೂರು
*ಪರಮೇಶ್ವರನಿಗೇಕೆ ವಿಭೂತಿ ತಿಲಕ; ವಿಷ್ಣುವಿಗೇಕೆ ನಾಮ ತಿಲಕ?*
ಪಾಪ! ಆ ಮುಗ್ಧರಿಬ್ಬರೂ ಭಕ್ತರನ್ನು ನಂಬಿದ್ದಕ್ಕೆ ಒಬ್ಬರಿಗೆ ನಾಮ, ಇನ್ನೊಬ್ಬರಿಗೆ ಬೂದಿ ಸಿಕ್ಕಿತಂತೆ!

ಹಾಡ್ಯ. ಬ. ಜಯಾನಂದ, ಮೈಸೂರು
*ಹಿಂದಿನ ನೆನಪೂ ಬೇಡ, ಮುಂದಿನ ಕನಸೂ ಬೇಡ. ಈಗಿನದ್ದನ್ನು ನೋಡು ಎಂದನಂತೆ ಬುದ್ಧ. ನೀವೇನಂತೀರಿ?*
ಒಪ್ಪಲಾರೆ. ನೆನ್ನೆಯ ನೆನಪು, ನಾಳೆಯ ಕುತೂಹಲ ಇಲ್ಲದಿದ್ದರೆ ಸೀರಿಯಲ್ ನೋಡಲು ಆಗುವುದಿಲ್ಲ.

ಸೃಜನ ಜೈನ್, ಹೂವಿನಹಡಗಲಿ
*ನಿಜದಾರಿ, ಕಾಲುದಾರಿ, ಹೆದ್ದಾರಿ, ಮೂಲದಾರಿ; ಯಾವ ದಾರಿಯಲ್ಲಿ ಸಾಗಲಿ?*
ನಿಮ್ಮ ಪ್ರವೃತ್ತಿಯ ಮೇರೆಗೆ ಮಂತ್ರಿಯಾದರೆ ಅಡ್ಡದಾರಿ, ಬೈಕಿಗನಾದರೆ ಹಾವ್ದಾರಿ, ಕುಡುಕನಾದರೆ ಝೆಡ್ ದಾರಿ.....

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ಸತ್ಯಕ್ಕೆ ಜಯ ನಿಧಾನವಾಗಿ ಸಿಗಲು ಕಾರಣವೇನು?*
ಅಡ್ಜರ್ನ್‌ಮೆಂಟ್.

ಪಿ.ಜೆ. ರಾಘವೇಂದ್ರ, ಮೈಸೂರು
*ಬಿಗ್‌ಬಾಸ್ ಮನೆಯೊಳಗೆ ರಾಜಕಾರಣಿಗಳಿಗೆ ಪ್ರವೇಶವಿಲ್ಲವೇಕೆ?*
ನೂರಲ್ಲ, ಮೂರೇ ದಿನದಲ್ಲಿ ಮನೆಯನ್ನು ತಮ್ಮದಾಗಿಸಿಕೊಂಡು ಬಿಗ್‌ಬಾಸ್‌ಗೇ ಗೇಟ್‌ಪಾಸ್ ನೀಡುವರೆಂಬ ಭಯ!

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ
*ಹೂಗಳ್ಳನಿಗೂ, ಹೃದಯಗಳ್ಳನಿಗೂ ಏನು ವ್ಯತ್ಯಾಸ?*
ಒಬ್ಬ ಛಿ! ಕಳ್ಳ! ಎನ್ನುತ್ತಾನೆ; ಮತ್ತೊಬ್ಬನಿಗೆ ಛಿ ಕಳ್ಳ! ಎನ್ನುತ್ತಾರೆ!

ಮಳ್ಳೂರು ಪ್ರಕಾಶ್, ಮೈಸೂರು
*ಸರ್/ಮೇಡಮ್, ನೀವು ಗಂಡಸೋ, ಹೆಂಗಸೋ, ತ್ರಿಶಂಕುವೋ, ಅಥವಾ...?*
ಏಕೆ? ಜಾತಿಗಣತಿ ಮುಗಿದು ಈಗ ಲಿಂಗ ಗಣತಿ ಆರಂಭವಾಗಿದೆಯೇನು?

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಪ್ರೇಮದ ಚಿಹ್ನೆಯಾಗಿ ಹೃದಯವನ್ನೇ ಬಳಸುವುದೇಕೆ?*
'ದಯ' ಇರುವುದರಿಂದ. ಪ್ರೇಮಕ್ಕೆ ದಯೆಯೇ ಮೂಲ ಭಾವ.

ಪಿ.ಎನ್. ಶ್ರೀವತ್ಸ, ಬೆಂಗಳೂರು
*ಡೆಂಗ್ಯೂ: ಇದರ ನಿಜವಾದ ಅರ್ಥ?*
ನನ್ನ ಮಲೆಯಾಳಿ ಸ್ನೇಹಿತೆ ಥ್ಯಾಂಕ್ಯೂ ಎಂದು ಹೇಳುವುದೇ ಹೀಗೆ! ಅರ್ಥ – ಧನ್ಯವಾದಗಳು!

## ಬಹುಮಾನಿತ ಪ್ರಶ್ನೆ

ಕಲ್ಯಾಣ್ ಆರ್, ಬನಹಟ್ಟಿ
*ಗುಡಿಯೊಳಗಿನ ಗಂಟೆಗೂ, ಶಾಲೆಯೊಳಗಿನ ಗಂಟೆಗೂ ಇರುವ ವ್ಯತ್ಯಾಸವೇನು?*
ಗುಡಿಯಲ್ಲಿ ಗಂಟೆ ಹೊಡೆಯುವ ಸಮಯಕ್ಕೆ ಬಂದರೆ ಮಂಗಳಾರತಿ. ಶಾಲೆಯಲ್ಲಿ ಗಂಟೆ ಹೊಡೆಯುವ ಸಮಯಕ್ಕೆ ಬರದಿದ್ದರೆ ಮಂಗಳಾರತಿ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಇಲ್ಲೊಬ್ಬರು ಶೋಭಾ ಎಂದು ಹೆಸರಿದ್ದರೂ ಶೋಭಾಯಮಾನವಾಗಿ ಮಾತನಾಡುವುದಿಲ್ಲವಲ್ಲಾ, ಏಕೆ?*
ಹೆಸರಿಗೆ ತಕ್ಕಂತೆ ಇದ್ದಾರೆ! ಅವರ ನಿಜವಾದ ಹೆಸರು ಶೋಭಾ ಅಲ್ಲ, ಕ್ಷೋಭಾ.

ಕುಬೇರಪ್ಪ ಎಂ. ವಿಭೂತಿ, ಹರಿಹರ
*ಹೂವಿನ ಸುವಾಸನೆ, ಹೆಣ್ಣಿನ ರತಿವರ್ಚಸ್ಸಿಗೆ ಮರುಳಾಗದವರು ಯಾರಿದ್ದಾರೆ?*
ಮೂಗಿಗೆ ನೆಗಡಿ, ಕಣ್ಣಿಗೆ ಪೊರೆ ಬಂದವರು.

ಎಚ್. ಸಿದ್ಧಾರ್ಥ ಹೆಬ್ಬಾರ್, ಈದು
*ರೈತನ ಆಪದ್ಬಾಂಧವ ಯಾರು?*



ಮೋಡ.

ಬೆಳ್ಳಾವೆ ರಮೇಶ, ಬೆಂಗಳೂರು
*'ಬೆಂಗಳೂರಿನ ರಸ್ತೆಗುಂಡಿಗಳು' ಎಂಬ ವಿಷಯದ ಬಗ್ಗೆ ಪ್ರಬಂಧ ಮಂಡಿಸಬೇಕು; ಮಾರ್ಗದರ್ಶನ ನೀಡುವಿರಾ?*
ಓ! ಮೂರನೇ ಗುಂಡಿ ಹತ್ರ ಎಡಕ್ಕೆ ತಿರುಗಿ, ಆರನೇ ಗುಂಡಿ ಹತ್ತಿಳ್ಳು, ಇಪ್ಪತ್ತೇಳ್ನೇ ಗುಂಡಿ ಹತ್ರ ರೈಟ್ಗೆನ್ನಿ; ಹಳ್ದಲ್ಲೇ ಕಾಯ್ತಿರ್ತೀನಿ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
*ಕತ್ತೆಯೂ ಮುಟ್ಟದ ತಂಬಾಕನ್ನು ಮನುಷ್ಯ ತಿನ್ನಲು ಕಾರಣವೇನು?*
ಒಳಗೊಳಗೇ ಸುಟ್ಟುಕೊಂಡು ಕಡೆಯ ಸವಾರಿಯಲ್ಲಿ ಸ್ಲಿಮ್ ಆಗಿ ಕಾಣಲು.

ಬೆಟ್ಟಹಳ್ಳಿ ಗೋಪಿನಾಥ್, ಸೂಲಿಬೆಲೆ
*ಸ್ವಾಮೀಜಿ ಜನರ ಬಳಿ ಬಂದರೆ ಶ್ರಮ; ಜನರೇ ಸ್ವಾಮೀಜಿ ಬಳಿ ಹೋದರೆ ಆಶ್ರಮ. ನೀವೇನಂತೀರಿ?*
ಸ್ವಾಮೀಜಿ ಜನರತ್ತ ಬಂದರೆ ಕಲೆಕ್ಷನ್; ಜನ ಸ್ವಾಮೀಜಿಯತ್ತ ಹೋದರೆ ಸೆಲೆಕ್ಷನ್. ಪುಢಾರಿ ಸ್ವಾಮೀಜಿಯತ್ತ ಹೋದರೆ ಎಲೆಕ್ಷನ್!

■ ರಾಮ್